ಅ) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಎಲಿಫೆಂಟ್ ಪ್ರೂಫ್ ಟ್ರೆಂಚ್ ಹೊಡೆಸಲು ಸರಿಯಾದ ದರಪಟ್ಟಿ ನಿಗದಿಪಡಿಸದ ಕಾರಣ 1999 ರಿಂದ 2001ರ ಅವಧಿಯಲ್ಲಿ ರೂ.79.,37 ಲಕ್ಷ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ದರಪಟ್ಟಿಗಿಂತ ಹೆಚ್ಚಿನ ದರ ಪಾವತಿ ಮಾಡಲು ಕಾರಣವೇನು;

ಇ) ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಯಾರು; ಅವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ; ಅದರಿಂದ ಎಷ್ಟು ನಷ್ಟದ ಮೊತ್ತ ವಸೂಲಿ ಮಾಡಲಾಗಿದೆ;

ಈ) ಈ ರೀತಿಯ ಪ್ರಸಂಗಗಳು ಮರುಕಳಿಸದಂತೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ ಸಚಿವರು):

ಅ) ಗಮನಕ್ಕೆ ಬಂದಿದೆ.

ಆ) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಈ ಹಿಂದೆ ತೋಡಲಾಗಿರುವ (3+1)X2.00 ಮೀ. ಅಳತೆಯ ಆನೆತಡೆ ಕಂದಕಗಳು ಪರಿಣಾಮಕಾರಿಯಾಗದಿರುವುದು ಮತ್ತು
2
ಇದರಿಂದ ಹತ್ತಿರದ ಕೃಷಿ ಕ್ಷೇತ್ರ ಮತ್ತು ಮಾನವ ಪ್ರಾಣಹಾನಿಯನ್ನು ತಡೆಗಟ್ಟಲು ವಿಫಲವಾಗಿರುವುದು ಕಂಡು ಬಂದಿದೆ. ಅನೆತಡೆ ಕಂದಕಗಳನ್ನು ಪರಿಣಾಮಕಾರಿಯಾಗಿ ಮಾಡಲು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ತಮ್ಮ ಕ್ಷೇತ್ರದಲ್ಲಿನ ಅನುಭವ ಮತ್ತು ವನ್ಯ ಪ್ರಾಣಿ ನಿರ್ವಹಣೆಗಳ ಬಗ್ಗೆ ಇರುವ ಅನುಭವಗಳನ್ನು ಅಳವಡಿಸಿಕೊಂಡು (3+1.50)X2.00 ಮೀ.
2
ಅಳತೆಯ ಆನೆತಡೆ ಕಂದಕಗಳನ್ನು ತೆಗೆಸಿರುತ್ತಾರೆ. ಈ ಅಳತೆಯ ಕಂದಕಗಳು ಬೆಂಗಳೂರಿನ ಇತರೆ ಯಾವುದೇ ಆನೆ ಪ್ರದೇಶದಲ್ಲಿ ತೋಡಿರುವುದಕ್ಕಿಂತ ವಿಭಿನ್ನವಾಗಿರುತ್ತದೆ. ಈ ಕಾರಣಗಳಿಂದ ಆನೆ ಹಾವಳಿ ತಡೆಗಟ್ಟಲು ಮೇಲೆ ನಮೂದಿಸಿರುವ ಅಳತೆಯ ಆನೆತಡೆ ಕಂದಕಗಳನ್ನು ಹಿಂದಿನ ಬೆಂಗಳೂರು ವೃತ್ತದ ಎಸ್.ಎಸ್.ಆರ್. ದರಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಿದ್ದು, ಅಂದಾಜು ಪಟ್ಟಿಯ ವೆಚ್ಚವು ರೂ. 22.93 ಲಕ್ಷ ಹೆಚ್ಚುವರಿಯಾಗಿರುತ್ತದೆ. ಆದ್ದರಿಂದ ಹೆಚ್ಚುವರಿ ಹಣ ಪಾವತಿಯಾಗಿರುವುದಿಲ್ಲ.

ಇ) ಮೇಲೆ ತಿಳಿಸಿರುವಂತೆ ಯಾವುದೇ ಅಕ್ರಮಗಳು ನಡೆದಿಲ್ಲದಿರುವುದರಿಂದ ಯಾವುದೇ ಸಂಬಂಧಿಸಿದ ಅಧಿಕಾರಿಯ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಕ್ರೀಡಾ ಪಟುಗಳಿಗೆ ಮಾಸಾಶನ ನೀಡುವ ಬಗ್ಗೆ

2445 (3091) : ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಜ್ಯ ಮಟ್ಟದ, ರಾಷ್ಟ್ರಮಟ್ಟದ ಕ್ರೀಡಾಪಟುಗಳ ಸಂಖ್ಯೆಯೆಷ್ಟು; ವಿವಿಧ ಕ್ರೀಡೆಗಳು ಸೇರಿ ಜಿಲ್ಲಾವಾರು ವಿವರ ನೀಡುವುದು.

ಆ) ರಾಜ್ಯ ಮಟ್ಟದ ಹಾಗೂ ರಾಷ್ಟ್ರಮಟ್ಟದ ಕ್ರೀಡಾಪಟುಗಳಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ನೀಡುವ ಮಾಸಾಶನವೇಷ್ಟು; ಎಷ್ಟು ಜನ ಕ್ರೀಡಾ ಪಟುಗಳು ಮಾಸಾಶನ

ಪಡೆಯುತ್ತಿದ್ದಾರೆ: ಎಷ್ಟು ಕ್ರೀಡಾ ಪಟುಗಳು ಮಾಸಾಶನ ಪಡೆಯಲು ಬಯಸಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಜಿಲ್ಲಾವಾರು ವಿವರ ನೀಡುವುದು.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು)

ಅ) ರಾಜ್ಯ ಮಟ್ಟದ ಹಾಗೂ ರಾಷ್ಟ್ರಮಟ್ಟದ ಕ್ರೀಡಾಪಟುಗಳ ಜಿಲ್ಲಾವಾರು ವಿವರ

1) ಬೆಂಗಳೂರು ನಗರ ಜಿಲ್ಲೆ	191	152
2) ಬೆಂಗಳೂರು ಗ್ರಾಮಾಂತರ	15	05
3) ಮಂಗಳೂರು	87	48
4) ಗದಗ್	10	62
5) ಕೊಪ್ಪಳ	126	12
6) ಚಾಮರಾಜನಗರ	08	–
7) ಬಾಗಲಕೋಟೆ	21	23
8) ಹಾವೇರಿ	–	31
9) ಶಿವಮೊಗ್ಗ	78	151
10) ರಾಯಚೂರು	07	11
11) ಬಳ್ಳಾರಿ	07	05
12) ಬೀದರ್	118	04
13) ಗುಲ್ಬರ್ಗಾ	20	05
14) ಬಿಜಾಪುರ	162	22
15) ಕಾರವಾರ	70	14
16) ಧಾರವಾಡ	160	18
17) ಕೊಡಗು	97	13
18) ಚಿಕ್ಕಮಗಳೂರು	159	06
19) ಮಂಡ್ಯ	571	168
20) ದಾವಣಗೆರೆ	25	63
21) ಚಿತ್ರದುರ್ಗ	94	149
22) ತುಮಕೂರು	199	50
23) ಕೋಲಾರ	06	05
24) ಬೆಳಗಾಂ	113	113
25) ಹಾಸನ	124	84
26) ಮೈಸೂರು	495	89
27) ಉಡುಪಿ	13	09
28) ರಾಜ್ಯ ಕ್ರೀಡಾ ಸಂಸ್ಥೆಗಳಿಂದ	–	2285
ಒಟ್ಟು	**2976**	**3597**

ಆ) 1. ರಾಜ್ಯ ಸರ್ಕಾರದಿಂದ ನೀಡುವ ಮಾಸಾಶನದ ವಿವರ:

ಎ) ರಾಜ್ಯ ಮಟ್ಟದ ಕ್ರೀಡಾಪಟುಗಳಿಗೆ ಪ್ರತಿ ಮಾಹೆಗೆ ರೂ.300–00

ಬಿ) ರಾಷ್ಟ್ರ ಮಟ್ಟದ ಕ್ರೀಡಾಪಟುಗಳಿಗೆ ಪ್ರತಿ ಮಾಹೆಗೆ ರೂ.400–00

ಸಿ) ಅಂತರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ಪ್ರತಿ ಮಾಹೆಗೆ ರೂ.600–00

2. ಕೇಂದ್ರ ಸರ್ಕಾರದಿಂದ ನೀಡುವ ಮಾಸಾಶನದ ವಿವರ:–

ಎ) ವರ್ಲ್ಡ್ ಕಪ್ಸ್, ವರ್ಲ್ಡ್ ಚಾಂಪಿಯನ್‌ಷಿಪ್, ಒಲಂಪಿಕ್ಸ್, ಏಷ್ಯನ್ ಗೇಮ್ಸ್, ಕ್ರೀಡೆಗಳಲ್ಲಿ ಚಿನ್ನದ ಪದಕ ಹಾಗೂ ಬೆಳ್ಳಿಯ ಪದಕ ಪಡೆದ ಕ್ರೀಡಾಪಟುಗಳಿಗೆ ಪ್ರತಿ ಮಾಹೆಗೆ ರೂ.2500–00. ಕಂಚಿನ ಪದಕ ಪಡೆದ ಕ್ರೀಡಾಪಟುಗಳಿಗೆ ಪ್ರತಿ ಮಾಹೆಗೆ ರೂ.2000.00.

ಬಿ) ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಪಡೆದವರಿಗೆ ಪ್ರತಿ ಮಾಹೆಗೆ ರೂ.2000–00

ಸಿ) ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಪಡೆದವರಿಗೆ ಪ್ರತಿ ಮಾಹೆಗೆ ರೂ.2000

3. ರಾಜ್ಯದಲ್ಲಿ 535 ಕುಸ್ತಿ:ಕ್ರೀಡಾಪಟುಗಳು ಮಾಸಾಶನವನ್ನು ಪಡೆಯುತ್ತಿದ್ದಾರೆ.

4. 118 ಕುಸ್ತಿ:ಕ್ರೀಡಾಪಟುಗಳು ರಾಜ್ಯ ಸರ್ಕಾರದಿಂದ ನೀಡುವ ಮಾಸಾಶನ ಪಡೆಯಲು ಬಯಸಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಜಿಲ್ಲಾವಾರು ವಿವಿರ ಕೆಳಕಂಡಂತಿದೆ.

1) ಧಾರವಾಡ	–	43
2) ಗದಗ್	–	02
3) ಹಾವೇರಿ	–	24
4) ದಾವಣಗೆರೆ	–	01
5) ಬೆಳಗಾಂ	–	13
6) ಬಾಗಲಕೋಟೆ	–	02
7) ಕೋಲಾರ	–	01
8) ಬೆಂಗಳೂರು	–	02
9) ಶಿವಮೊಗ್ಗ	–	12
10) ಚಿತ್ರದುರ್ಗ	–	01
11) ಚಿಕ್ಕಮಗಳೂರು	–	17
ಒಟ್ಟು		**118**

ರಾಜ್ಯದ ಬರ ಕಾಮಗಾರಿಗಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ

2451(3215) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಬರಕಾಮಗಾರಿಗಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು;

ಆ) ಈ ಹಣವನ್ನು ಯಾವ ಯಾವ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

ಇ) ಬಿಡುಗಡೆ ಮಾಡಿರುವ ಹಣದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)